**ದಿನಾಂಕ ಃ 15-03-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- ಪ್ರತಿವಾದಿಯ ಪರ ಶ್ರೀ. ಎಂ.ಎನ್ . ವಕೀಲರಿಂದ ಃ-**

13. ಪ್ರತಿವಾದಿ ರಾಮಯ್ಯನವರು ಪೊಲ್ಲಮ್ಮನವರಿಂದ ಮನೆ ಮತ್ತು ಹಿತ್ತಲನ್ನು ಖರೀದಿ ಮಾಡಿದ ಬಗ್ಗೆ ನಿಮ್ಮ ತಂದೆಯವರಿಗೆ ಗೊತ್ತಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯವರು ಸಲ್ಲಿಸಿರುವ ತಕರಾರು ಅರ್ಜಿಯಲ್ಲಿ ಸದರಿ ವಿಷಯವನ್ನು ಹೇಳಿರುತ್ತಾರೆ ಅದನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ . 1ನೇ ಪ್ರತಿವಾದಿಯ ತಂದೆ ಪರ್ಸಯ್ಯನವರು ಪೊಲ್ಲಮ್ಮನವರಿಂದ ದಿ.19-08-1953 ರಲ್ಲಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆರೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನೀವಾಗಲೀ ನಿಮ್ಮ ತಂದೆಯಾಗಲೀ ಓದಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೊಲ್ಲಮ್ಮನವರು ಮಾರಾಟ ಮಾಡಿರುವ ಸ್ವತ್ತಿನ ಬಗ್ಗೆ ನಿಮಗೆ ಯಾವುದೇ ಸ್ವಾಧೀನ ಅಥವಾ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿ. ನಿಮ್ಮ ತಂದೆಯವರು ಸದರಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿ ಮಾಡಿ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ನೀವು ನೀಡಿರುವ ಚೆಕ್ಕುಬಂಧಿ ಮತ್ತು ವಿಸ್ತೀರ್ಣ ಸರಿ ಇಲ್ಲ ಎಂದರೆ ಸರಿಯಲ್ಲ. ನೀವು ಸ್ವತ್ತಿನ ಮಾಲೀಕರು ಅಲ್ಲ ಹಾಗೂ ನೀವು ಹೇಳಿರುವ ದಾವಾ ಸ್ವತ್ತಿನಲ್ಲಿ ನೀವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನೀವು ಸರ್ವೆ ನಂ.82/6 ಸಿ ನಲ್ಲಿ, 1 ಎಕರೆ 1 ಗುಂಟೆ ಸ್ವತ್ತು ಇದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಸದರಿ 1 ಎಕರೆ ಒಂದು ಗುಂಟೆ ಒಂದೇ ಚೆಕ್ಕುಬಂಧಿ ಬರುತ್ತದಾ ಎಂದರೆ ಒಂದೇ ಚೆಕ್ಕು ಬಂಧಿ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ 1 ಎಕರೆ 1 ಗುಂಟೆಯ ಚೆಕ್ಕುಬಂಧಿ ಪೂರ್ವಕ್ಕೆ ದುರ್ಗಪ್ಪನವರ ಮಕ್ಕಳ ಜಮೀನು, ಪಶ್ಚಿಮಕ್ಕೆ ನಮ್ಮದೇ ಜಮೀನು, ಉತ್ತರಕ್ಕೆ ಸರ್ವೆ ನಂ. 79/5 ಬಿ ನಮ್ಮದೇ ಜಮೀನು, ದಕ್ಷಿಣಕ್ಕೆ ಗ್ರಾಮ ಠಾಣಾ ಎಂದು ನುಡಿಯುತ್ತಾರೆ.

14. ಸದರಿ ಚೆಕ್ಕುಬಂಧಿಯಲ್ಲಿ ಪೂರ್ವಕ್ಕೂ ಮತ್ತು ಉತ್ತರಕ್ಕೂ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ದಾವೆಯನ್ನು ಹೂಡಿದ ಸಮಯದಲ್ಲಿ ಯಾವುದೇ ರಸ್ತೆ ಇರಲಿಲ್ಲ, ಆದರೆ ಅನುಮತಿಯ ಮೇಲೆ ಪೂರ್ವ ಪಶ್ಚಿಮಕ್ಕೆ ರಸ್ತೆ ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಿಮ್ಮ ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಮನೆ ಮತ್ತು ಹಿತ್ತಲಿನ ಚೆಕ್ಕುಬಂಧಿ ಹೇಳಲು ಆಗುತ್ತದೆಯಾ ಎಂದರೆ ಅವರಿಗೆ ಮನೆ ಮಾತ್ರ ಇದೆ ಹಿತ್ತಲು ಇಲ್ಲ ಎಂದು ನುಡಿಯುತ್ತಾರೆ. ಮನೆಯ ಚೆಕ್ಕುಬಂಧಿ ಪೂರ್ವಕ್ಕೆ ರಂಗಯ್ಯನವರ ಖರಾಬು ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಶಿವಣ್ಣನವರ ಮನೆ, ದಕ್ಷಿಣಕ್ಕೆ ಅವರ ತಮ್ಮ ಶಿವರಾಮಯ್ಯನವರ ಮನೆ ಎಂದು ನುಡಿಯುತ್ತಾರೆ. ಈ ಮೇಲೆ ಪೂರ್ವಕ್ಕೆ ಹೇಳಿರುವ ಖರಾಬು ಜಮೀನು ರಾಮಯ್ಯನವರ ಮನೆಯ ಪೂರ್ವಕ್ಕೆ ಇರುವಂತಹ ಜಮೀನು ಎಂದರೆ ಸರಿ. ನೀವು ಹೇಳುತ್ತಿರುವ ಖರಾಬು ಆದ ನಂತರ ರಸ್ತೆ ಇದೆ ಎಂದರೆ ಅದು ಇತ್ತೀಚೆಗೆ ಮಾಡಿಕೊಂಡಿರುವ ರಸ್ತೆ ಎಂದು ನುಡಿಯುತ್ತಾರೆ. ರಸ್ತೆ ಆದ ನಂತರ 82/6 ಸಿ ಬರುತ್ತದೆ ಎಂದರೆ ಇಲ್ಲ ಜಂಟಿ ಇರುತ್ತದೆ ಎಂದು ನುಡಿಯುತ್ತಾರೆ. ಆ ರಸ್ತೆಗೆ ಜಂಟಿ ಬರುತ್ತದಾ ಎಂದರೆ ಸರ್ವೆ ನಂ.82/6 ಸಿ ಹಾಗೂ ಆ ಜಮೀನಿಗೆ ಇರುವಂತಹ ಖರಾಬು ಜಂಟಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ

ನಂ. 82/6 ಸಿ ಯಾವ ದಿಕ್ಕಿಗೆ ರಸ್ತೆ ಇರುತ್ತದೆ ಎಂದರೆ ಪಶ್ಚಿಮದಿಂದ ಪೂರ್ವಕ್ಕೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಹೇಳುತ್ತಿರುವ ರಸ್ತೆ ಸರ್ವೆ ನಂ.82/6 ಸಿ ನಲ್ಲಿ ಹೋಗುತ್ತಿದೆಯಾ ಅಥವಾ 7 ಗುಂಟೆ ಖರಾಬಿ ನಲ್ಲಿ ಹೋಗುತ್ತಿದೆಯಾ ಎಂದರೆ ಸರ್ವೆ ನಂ.82/6 ಸಿನಲ್ಲಿ ಹೋಗುತ್ತಿದೆ ಎಂದು ನುಡಿಯುತ್ತಾರೆ. ನೀವು ಹೇಳುವ ಪ್ರಕಾರ ಸರ್ವೆ ನಂ.82/6 ಸಿ ಬೇರೆ ಫೀಸ್ ಇರುತ್ತದೆ ಹಾಗೂ 7 ಗುಂಟೆ ಖರಾಬು ಬೇರೆ ಫೀಸ್ ಇರುತ್ತದೆ ಎಂದರೆ ಸರಿ. ನೀವು ಹೇಳುತ್ತಿರುವ ಖರಾಬು ಅದು ಖರಾಬು ಜಮೀನು ಅಲ್ಲ ಪ್ರತಿವಾದಿಗಳ ಹಿತ್ತಲು ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವತ್ತನುನ ಕಬಳಿಸುವ ಉದ್ದೇಶದಿಂದ ಅವರ ಹಿತ್ತಲು ಜಮೀನನ್ನು ಸೇರಿಸಿಕೊಂಡು ಸುಳ್ಳು ಚೆಕ್ಕುಬಂಧಿ ನೀಡಿ ಸುಳ್ಳು ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ಸರ್ವೆ ನಂ. 82/6 ಸಿ ನ ಪೂರ್ವಕ್ಕೆ ರಸ್ತೆ ಇದೆ ಎಂದರೆ ಅದು ನಮ್ಮ ಜಮೀನಿನಲ್ಲಿ ಇಲ್ಲ ಬೇರೆಯವರ ಜಮೀನಿನಲ್ಲಿ ಇದೆ ಎಂದು ನುಡಿಯುತ್ತಾರೆ.

15. ಸರ್ವೆ ನಂ.82/6 ಸಿ ನ ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. 7 ಗುಂಟೆ ಜಮೀನಿನಲ್ಲಿ ಉತ್ತರಕ್ಕೆ ರಸ್ತೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಉದ್ದೇಶ ಪೂರ್ವಕವಾಗಿ ಸುಳ್ಳು ಚೆಕ್ಕುಬಂಧಿ, ವಿಸ್ತೀರ್ಣ ನೀಡಿ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ನಂ.82/6 ಸಿ ನ ಉತ್ತರಕ್ಕೆ ಹಾಗೂ ಪೂರ್ವಕ್ಕೆ ಮೊದಲಿನಿಂದಲೂ ಸಹ ರಸ್ತೆ ಇತ್ತು ಆದರೂ ಈಗ ರಸ್ತೆ ಆಗಿದೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**